# ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ

❑ ಕೆ.ಎಸ್.ರಾಮಸ್ವಾಮಿ ಶಾಸ್ತ್ರಿ

೧೮೯೨ರಲ್ಲಿ ತಿರುವನಂತಪುರದಲ್ಲಿಯೂ ಮತ್ತೆ ಅವರು ಅಮೆರಿಕದಿಂದ ಬಂದಮೇಲೆ ೧೮೯೭ರಲ್ಲಿ ಮದ್ರಾಸ್‌ನಲ್ಲಿಯೂ ನಾನು ಸ್ವಾಮಿ ವಿವೇಕಾನಂದರನ್ನು ಸಂಧಿಸಿ ಅನೇಕ ದಿನಗಳು ಅವರೊಡನೆ ಕಳೆದಿರುವೆ. ಈ ಚಿರಸ್ಮರಣೀಯ ಪವಿತ್ರ ಸಂಪರ್ಕ ದಿಂದ ನನ್ನ ಇಡೀ ಜೀವನವೇ ಪರಿವರ್ತನೆಗೊಂಡಿದೆ.

ನಾನು ಮತ್ತು ನನ್ನ ತಂದೆ (ಕೆ.ಸುಂದರರಾಮ ಅಯ್ಯರ್) ತಿರುವನಂತಪುರದಲ್ಲಿರುವಾಗ ಸ್ವಾಮೀಜಿ ಕೊಚಿನ್‌ನಿಂದ ಅಲ್ಲಿಗೆ ಬಂದರು. ಅವರು ಅಲ್ಲಿಂದ ಒಂದು ಪರಿಚಯ ಪತ್ರದೊಡನೆ ಬಂದಿದ್ದರು. ನಾನಾಗ ಮೆಟ್ರಿಕ್ಯುಲೇಷನ್ ಪಾಸಾಗಿ ಕಾಲೇಜು ಸೇರಿದ್ದೆ. ಸ್ವಾಮೀಜಿ ಆಗಿನ್ನೂ ಲೋಕದ ಬೆಳಕಿಗೆ ಬಂದಿರಲಿಲ್ಲ, ಆದರೆ ಹಿಂದೂಧರ್ಮ ಮತ್ತು ಆಧ್ಯಾತ್ಮಿಕತೆಯನ್ನು ಪ್ರಪಂಚದ ಎಲ್ಲೆಡೆ ಹರಡಬೇಕೆಂಬ ಮಹತ್ವಾಕಾಂಕ್ಷೆ ಅವರದಾಗಿತ್ತು. ಒಂದು ದಿನ ಬೆಳಿಗ್ಗೆ ಅವರು ಅನಿರೀಕ್ಷಿತವಾಗಿ ನಮ್ಮ ಮನೆಗೆ ಬಂದರು. ಉಜ್ವಲವಾದ ಮುಖ, ಎತ್ತರ ಮತ್ತು ರಾಜ ಗಾಂಭೀರ್ಯದ ನಿಲುವು, ತಲೆಯ ಮೇಲೆ ಕಾವಿಬಣ್ಣದ ಪೇಟ, ಪಾದದವರೆಗೂ ಬರುತ್ತಿದ್ದ ಕಾವಿಬಣ್ಣದ ನಿಲುವಂಗಿ, ಅದೇ ಬಣ್ಣದ ಒಂದು ಬಟ್ಟೆಯನ್ನು ಸೊಂಟಕ್ಕೆ ಸುತ್ತಿದ್ದರು.

"ಪ್ರೊ. ಸುಂದರರಾಮನ್ ಇರುವರೆ? ಅವರಿಗೊಂದು ಕಾಗದ ಇದೆ," ಎಂದು ನನ್ನನ್ನು ಸ್ವಾಮೀಜಿ ಕೇಳಿದರು. ಅವರ ಧ್ವನಿ ಘಂಟಾನಾದದಂತಿತ್ತು. "ಅವರ ಧ್ವನಿ ವೀಣಾನಾದದಂತೆ ಮಧುರ, ಮತ್ತು ಗಂಭೀರ. ಅದರ ಮಧುರ ಸ್ಪಂದನ ಸಭೆ ಹೃದಯ ಗಳೆರಡನ್ನೂ ತುಂಬುತ್ತಿತ್ತು. ಒಮ್ಮೆ ಶ್ರೋತೃಗಳ ಮನಸ್ಸನ್ನು ಸೆರೆಹಿಡಿದರೆಂದರೆ ಅವರ ಧ್ವನಿ ಪಿಯಾನೋ ಅಂತೆ ಇಡೀ ಜೀವ ನಾಡಿಯನ್ನೇ ಮೀಟುತ್ತಿತ್ತು"—ರೋಮಾ ರೋಲಾ ಅವರ ಈ ಮಾತು ಎಷ್ಟು ಸಮರ್ಪಕವಾಗಿದೆ! ನಾನು ತಲೆ ಎತ್ತಿ ಅವರನ್ನು ನೋಡಿದೆ. ನನ್ನ ಎಳೆಯ ಬುದ್ಧಿಗೆ (ನನಗಾಗ ಕೇವಲ ಹದಿ ನಾಲ್ಕು ವರ್ಷ) ಅವರು ಮಹಾರಾಜ ಅನಿಸಿತು. ನಾನು ಆ ಪತ್ರ ವನ್ನು ತೆಗೆದುಕೊಂಡು ನನ್ನ ತಂದೆ ಇದ್ದೆಡೆಗೆ (ಮಹಡಿಯ ಮೇಲೆ) ಓಡಿದೆ. "ಒಬ್ಬರು ಮಹಾರಾಜರು ಬಂದು ಹೊರಗಡೆ ಕಾಯುತ್ತಿದ್ದಾರೆ. ನಿಮಗಾಗಿ ಈ ಪತ್ರ ಕೊಟ್ಟರು" ಎಂದೆ. ನನ್ನ ತಂದೆ ನಕ್ಕು ನುಡಿದರು : "ರಾಮಸ್ವಾಮಿ! ನೀನೊಬ್ಬ ಹುಚ್ಚ! ನಮ್ಮ ಮನೆಗೆಲ್ಲ ಮಹಾರಾಜರು ಬರುತ್ತಾರೇನಯ್ಯ!" ನಾನೆಂದೆ : "ದಯವಿಟ್ಟು, ಬಂದು ನೋಡಪ್ಪ. ಅವರು ಮಹಾರಾಜ ಎಂಬು ದರಲ್ಲಿ ಸಂದೇಹವೇ ಇಲ್ಲ." ನನ್ನ ತಂದೆ ಕೆಳಗೆ ಬಂದು



ಸ್ವಾಮಿ ವಿವೇಕಾನಂದರು ಮಹಾರಾಜರೇ ನಿಜ, ಆದರೆ, ಯಾವುದೊ ಚಿಕ್ಕ ರಾಜ್ಯದ ರಾಜನಲ್ಲ, ಅವರು ಅನಂತ ಆತ್ಮಸಾಮ್ರಾಜ್ಯದ ಒಡೆಯ.

ಸ್ವಾಮೀಜಿಯವರಿಗೆ ವಂದಿಸಿ ಅವರನ್ನು ಮೇಲೆ ಕರೆದುಕೊಂಡು ಹೋದರು. ಸ್ವಾಮೀಜಿಯವರೊಡನೆ ಬಹಳ ಹೊತ್ತಿನ ಮಾತು ಕತೆಯನಂತರ ನನ್ನ ತಂದೆ ನನ್ನೆಡೆಗೆ ಬಂದು ಹೇಳಿದರು : "ಅವರು ಮಹಾರಾಜರೇ ನಿಜ, ಆದರೆ ಯಾವುದೊ ಚಿಕ್ಕ ರಾಜ್ಯದ ರಾಜ ನಲ್ಲ, ಅವರು ಅನಂತ ಆತ್ಮಸಾಮ್ರಾಜ್ಯದ ಒಡೆಯ."

ಸ್ವಾಮೀಜಿ ಆಗ ನಮ್ಮ ಮನೆಯಲ್ಲಿ ಒಂಬತ್ತು ದಿನ ಗಳಿದ್ದರು. ನನ್ನ ತಂದೆ ಈ ಸಂದರ್ಭವನ್ನು "ಸ್ವಾಮಿ ವಿವೇಕಾ ನಂದರೊಡನೆ ನನ್ನ ಮೊದಲ ನವರಾತ್ರಿ" ಎಂದು ವಿವರಿಸಿದರು. ನನ್ನ ಮನಸ್ಸಿನ ಮೇಲಾದ ಪರಿಣಾಮವನ್ನಿಲ್ಲಿ ಸಂಕ್ಷಿಪ್ತವಾಗಿ ವಿವರಿಸುವೆನು.

ಒಂದು ದಿನ ಬೆಳಿಗ್ಗೆ ನನ್ನ ಪಠ್ಯ ಪುಸ್ತಕವಾದ ಕಾಳಿದಾಸನ "ಕುಮಾರಸಂಭವ"ವನ್ನು ಓದುತ್ತಿದ್ದಾಗ ಸ್ವಾಮೀಜಿ ಬಂದರು. "ಅದೇನು ಪುಸ್ತಕ ನೀನು ಓದುತ್ತಿರುವುದು?"ಎಂದು ಕೇಳಿದರು.

ಅದು "ಕುಮಾರಸಂಭವ, ಒಂದನೇ ಸರ್ಗ" ಎಂದೆ ನಾನು. ಅವರು ಕೇಳಿದರು, "ಮಹಾಕವಿಯ ಹಿಮಾಲಯದ ವರ್ಣನೆಯನ್ನು ಹೇಳುತ್ತೀಯ?" ಕಾಳಿದಾಸನ ಹಿಮಾಲಯ ವರ್ಣನೆ ಇರುವ ಶ್ಲೋಕಗಳನ್ನು ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ರಾಗದಲ್ಲಿ ಉಚ್ಚರಿಸಿದೆ. ಸ್ವಾಮೀಜಿ ಮುಗುಳ್ನಕ್ಕರು. ಅವರಿಗೆ ತೃಪ್ತಿಯಾದಂತೆನಿಸಿತು. ಅವರೆಂದರು : "ನಾನು ಆ ಅದ್ಭುತ ಹಿಮಾಲಯದಲ್ಲಿ ಬಹುಕಾಲ ಇದ್ದೆನೆಂಬುದು ನಿನಗೆ ಗೊತ್ತೆ?" ನನ್ನ ಕುತೂಹಲ ಕೆರಳಿತು. ಅವರು ಮೊದಲ ಶ್ಲೋಕವನ್ನು ಮತ್ತೆ ಉಚ್ಚರಿಸಲು ಹೇಳಿದರು. ನಾನು ಹಾಗೆಯೇ ಮಾಡಿದೆ. "ನಿನಗದರ ಅರ್ಥ ಗೊತ್ತೆ?" ಎಂದು ಕೇಳಿದರು, ನಾನದರ ಅರ್ಥ ಹೇಳಿದೆ. "ಅದು ಸರಿ. ಆದರೆ ಅಷ್ಟೇ ಅಲ್ಲ" ಎಂದರು ಸ್ವಾಮೀಜಿ. ಅನಂತರ ಅವರು ತಮ್ಮ ಅವರ್ಣನೀಯ ದೇವದುರ್ಲಭ ಕಂಠದಲ್ಲಿ ಆ ಶ್ಲೋಕವನ್ನು ಹೇಳಿದರು:

ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ<br>
ಹಿಮಾಲಯೋ ನಾಮ ನಗಾಧಿರಾಜಃ ।<br>
ಪೂರ್ವಾಪರೌ ತೋಯನಿಧಾವಗಾಹ್ಯ<br>
ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥

ಅನಂತರ ಹೇಳಿದರು : "ಈ ಶ್ಲೋಕದಲ್ಲಿ ಮುಖ್ಯವಾದ ಶಬ್ದಗಳು ದೇವತಾತ್ಮ ಮತ್ತು ಮಾನದಂಡ. ಕವಿ ಸೂಚಿಸುತ್ತಾನೆ—ಹಿಮಾಲಯ ಪ್ರಕೃತಿಯಿಂದ ಆಕಸ್ಮಿಕವಾಗಿ ನಿರ್ಮಿತವಾದ ಕೇವಲ ಗೋಡೆಯಲ್ಲ, ಅದರಲ್ಲಿ ದಿವ್ಯತೆ ಅಡಕವಾಗಿದೆ (ದೇವತಾತ್ಮ) ಹಾಗೂ ಭಾರತ ಮತ್ತು ಅದರ ನಾಗರೀಕತೆಗೆ ಒಂದು ರಕ್ಷಣೆಯಾಗಿದೆ. ಹಿಮಾಲಯವು ಸಿಂಧು, ಗಂಗಾ, ಬ್ರಹ್ಮಪುತ್ರ ಮುಂತಾದ ನದಿಗಳನ್ನು ಕಳಿಸುವುದರ ಮೂಲಕವೂ ಭಾರತವನ್ನು ರಕ್ಷಿಸುತ್ತಿದೆ. ಮಾನದಂಡ ಶಬ್ದದ ವೈಶಿಷ್ಟ್ಯವಿದು: ಭಾರತೀಯ ನಾಗರಿಕತೆ ಪ್ರಪಂಚದ ಇತರ ಎಲ್ಲ ನಾಗರಿಕತೆಗಳಿಗಿಂತ ಉತ್ತಮವಾದುದು ಮತ್ತು ಇದರ ಅಳತೆಗೋಲಿನಿಂದ ಉಳಿದ ನಾಗರಿಕತೆಗಳನ್ನು ಪರೀಕ್ಷಿಸಬೇಕು. ಇದು ಕವಿಯ ದೇಶಭಕ್ತಿಯ ಪರಮೋಚ್ಚ ಉದಾಹರಣೆ." ನನಗೆ ಅವರ ಮಾತನ್ನು ಕೇಳಿ ರೋಮಾಂಚನವಾಯಿತು. ಇಂದಿಗೂ ಅದನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿರುವೆ, ಈಗಲೂ ಅದು ಕಾಂತಿ ಗುಂದದೆ ನನ್ನ ಹೃದಯದಲ್ಲಿ ಬೆಳಗುತ್ತಿದೆ.

ಇನ್ನೊಂದು ದಿನ ಅವರು ನಮಗೆ ಹೇಳಿದರು : "ಆನುಷ್ಠಾನಿಕ ದೇಶಭಕ್ತಿ ಎಂದರೆ ಜನ್ಮಭೂಮಿಯ ಮೇಲೆ ಕೇವಲ ಭಾವನಾತ್ಮಕ ಪ್ರೀತಿಯಲ್ಲ, ದೇಶಬಾಂಧವರ ಸೇವೆಯಲ್ಲಿ ತೋರುವ ಉತ್ಸುಕತೆ. ನಾನು ದೇಶದ ಮೂಲೆಮೂಲೆಯನ್ನು ಸುತ್ತಾಡಿರುವೆ, ಮತ್ತು ಜನರ ಅಜ್ಞಾನ, ದುಃಖ, ಕೊಳಕುಜೀವನವನ್ನು ಕಣ್ಣಾರೆ ಕಂಡಿರುವೆ. ನನ್ನ ಇಡೀ ಆತ್ಮವೆ ಭುಗಿಲೆದ್ದಿದೆ. ಇಂತಹ ಅನಿಷ್ಟ ಪರಿಸ್ಥಿತಿಯನ್ನು ಬದಲಾಯಿಸಬೇಕೆಂಬ ಜ್ವಲಂತ ಆಸೆಯಿಂದ ಕುದಿಯುತ್ತಿದ್ದೇನೆ. ಕರ್ಮಸಿದ್ಧಾಂತವನ್ನು ಬದಿಗಿರಿಸಿ. ದುಃಖಿಸುವುದು ಅವರ ಕರ್ಮವಾದರೆ, ಅವರ ದುಃಖವನ್ನು ಹೋಗಲಾಡಿಸುವುದು ನಮ್ಮ ಕರ್ಮ. "

> **ಈ ನಾಲ್ಕು ಅತಿಮುಖ್ಯ ಶಬ್ದಗಳನ್ನು ನೆನಪಿನಲ್ಲಿಟ್ಟುಕೊ—ಅಭಯ, ಅಹಿಂಸೆ, ಅಸಂಗ ಮತ್ತು ಆನಂದ. ಈ ಶಬ್ದಗಳು ನಮ್ಮ ಎಲ್ಲ ಶಾಸ್ತ್ರಗಳ ಸಾರವನ್ನು ಸೂಚಿಸುತ್ತವೆ. ಇವುಗಳ ಗೂಢಾರ್ಥ ಮುಂದೆ ನಿನಗೆ ಅರ್ಥವಾಗುವುದು.**
>
> ***—ಸ್ವಾಮಿ ವಿವೇಕಾನಂದ***

"ನೀವು ದೇವರನ್ನು ನೋಡಬೇಕಾದರೆ ಮನುಷ್ಯರ ಸೇವೆ ಮಾಡಿ. ನಾರಾಯಣನನ್ನು ಪಡೆಯಲು ದರಿದ್ರನಾರಾಯಣನ ಸೇವೆಯನ್ನು ಮಾಡಬೇಕು." ಈ ಬೇರಿನಿಂದಲೇ ಮುಂದೆ ರಾಮಕೃಷ್ಣ ಮಹಾಸಂಘವೆಂಬ ಬೃಹದ್ ವೃಕ್ಷ ಹುಟ್ಟಿಕೊಂಡಿತು. ಅವರ ಮಾತು ನಮ್ಮ ಹೃದಯವನ್ನು ಕರಗಿಸಿತು ಮತ್ತು ಸಮಾಜಸೇವೆಯ ಅಗ್ನಿಯನ್ನು ನಮ್ಮ ಅಂತರಂಗದಲ್ಲಿ ಹೊತ್ತಿಸಿತು. ಸೇವೆ ಆಧ್ಯಾತ್ಮಿಕತೆಯಷ್ಟೇ ಪ್ರಿಯ ಅವರಿಗೆ. ಮುಂದೆ ಒಂದು ಪತ್ರದಲ್ಲಿ ಅವರು ಬರೆಯುತ್ತಾರೆ, "ದರಿದ್ರ ದೇವತೆಯ, ದುಃಖಿದೇವತೆಯ, ಪತಿತದೇವತೆಯ ಸೇವೆ ಮಾಡಲು ನಾನು ಮತ್ತೆ ಮತ್ತೆ ಹುಟ್ಟುವಂತಾಗಲಿ, ಎಂಥ ಕಷ್ಟವನ್ನಾದರೂ ಎದುರಿಸುವಂತಾಗಲಿ. ಇವರೇ ನನ್ನ ವಿಶೇಷ ಆರಾಧ್ಯ ದೇವತೆಗಳು. ನಾನು ನಂಬುವುದು ಇದೊಂದೇ ದೇವರನ್ನು—ಎಲ್ಲ ಜೀವಿಗಳ ಸಂಘಾತ." ಈ ಉದ್ವೇಗಪೂರ್ಣ ಮಾತು ರಂತಿದೇವನ ಧ್ವನಿಯಂತೆ ಕೇಳುವುದು.

ಇನ್ನೊಂದು ದಿನ ಸ್ವಾಮೀಜಿ ನನಗೆ ಹೇಳಿದರು, "ನೀನಿನ್ನೂ ಎಳೆಯ ಹುಡುಗ. ಮುಂದೆ ನೀನು ಉಪನಿಷತ್, ಗೀತೆ, ಬ್ರಹ್ಮಸೂತ್ರ, ಇತಿಹಾಸ, ಪುರಾಣ, ಆಗಮ ಇತ್ಯಾದಿಗಳ ಅಧ್ಯಯನ ಮಾಡುವೆಯೆಂದು ಆಶಿಸುತ್ತೇನೆ. ಇಂತಹ ಗ್ರಂಥಗಳು ಪ್ರಪಂಚದಲ್ಲಿ ಇನ್ನೆಲ್ಲಿಯೂ ನಿನಗೆ ಸಿಗವು. ಎಲ್ಲ ಜೀವಿಗಳಲ್ಲಿಯೂ ಮನುಷ್ಯನಿಗೆ ಮಾತ್ರ ವಸ್ತುಗಳ ಗೊತ್ತು ಗುರಿಯನ್ನು ತಿಳಿಯುವ ಹಂಬಲವಿದೆ. ಈ ನಾಲ್ಕು ಅತಿಮುಖ್ಯ ಶಬ್ದಗಳನ್ನು ನೆನಪಿನಲ್ಲಿಟ್ಟುಕೊ—ಅಭಯ, ಅಹಿಂಸೆ, ಅಸಂಗ ಮತ್ತು ಆನಂದ. ಈ ಶಬ್ದಗಳು ನಮ್ಮ ಎಲ್ಲ ಶಾಸ್ತ್ರಗಳ ಸಾರವನ್ನು ಸೂಚಿಸುತ್ತವೆ. ಇವುಗಳ ಗೂಢಾರ್ಥ ಮುಂದೆ ನಿನಗೆ ಅರ್ಥವಾಗುವುದು."

ಈ ಒಂಬತ್ತು ದಿನಗಳಲ್ಲಿ ನಾನು ಹೆಚ್ಚಾಗಿ ಅವರೊಡನೆಯೇ ಇರುತ್ತಿದ್ದೆ. ಏನೋ ಒಂದು ಆಕರ್ಷಣೆ ನನ್ನನ್ನು ಅವರೆಡೆಗೆ ಸೆಳೆಯುತ್ತಿತ್ತು. ನನ್ನ ತಂದೆ ಅವರೊಡನೆ ಎಷ್ಟೋ ದಾರ್ಶನಿಕ ಮತ್ತು ಧಾರ್ಮಿಕ ಪ್ರಶ್ನೆಗಳನ್ನು ಕುರಿತು ಚರ್ಚಿಸುತ್ತಿದ್ದರು. ಇವೆಲ್ಲ ನನ್ನ ಬುದ್ಧಿಗೆ ನಿಲುಕದವಾಗಿದ್ದವು. ಅವರ ವಿಶಾಲ ಕಣ್ಣುಗಳು ಅತ್ಯಾಕರ್ಷಕವಾಗಿದ್ದುವು—ದಯೆ ಪ್ರೀತಿಯನ್ನು ಹೊರಸೂಸುತ್ತಿದ್ದವು. ಅವರ ಧ್ವನಿಯಲ್ಲಿ ಮಾಧುರ್ಯ ಮತ್ತು ಶಕ್ತಿಗಳ ಒಂದು ಅಪೂರ್ವ ಮಿಶ್ರಣವಿತ್ತು. ಆ ಆಕೃತಿಯಲ್ಲಿ ರಾಜಗಾಂಭೀರ್ಯ ಎದ್ದು ಕಾಣುತ್ತಿತ್ತು. ಅವರೊಡನಿದ್ದು ಅವರ ಮುಗುಳ್ನಗೆಯನ್ನು ಸವಿಯುವುದೊಂದು ಮಹದಾನಂದವಾಗಿತ್ತು ನನಗೆ. ಆಗಾಗ ನನಗೆ ಅವರು ಏನಾದರೂ ಹೇಳುತ್ತಿದ್ದರು. ಆದರೆ

ಅವೆಲ್ಲ ಈಗ ನನ್ನ ನೆನಪಿನಲ್ಲಿ ಉಳಿದಿಲ್ಲ.

೧೮೯೭ರ ಫೆಬ್ರುವರಿ ಪ್ರಾರಂಭದಲ್ಲಿ ಸ್ವಾಮೀಜಿ ಮದ್ರಾಸನ್ನು ತಲುಪಿದರು. ರೋಮಾ ರೋಲಾ ಅವರಿಗೆ ಅಲ್ಲಿ ದೊರೆತ ಅದ್ದೂರಿಯ ಸ್ವಾಗತ ಸಮಾರಂಭವನ್ನು ವರ್ಣಿಸಿದ್ದಾರೆ. ಅದು ಅತ್ಯಂತ ಕರಾರುವಾಕ್ಕಾಗಿದೆ. ಇದಕ್ಕೆ ನಾನೇ ಸಾಕ್ಷಿ. ನಾನದನ್ನು ಕಣ್ಣಾರೆ ಕಂಡಿರುವೆ. ಅವರು ಬರೆಯುತ್ತಾರೆ: "ಹಲವು ವಾರಗಳಿಂದ ಮದ್ರಾಸ್ ಜನರು ಅವರ ಬರುವಿಕೆಗಾಗಿ ಅತ್ಯಂತ ಕಾತರರಾಗಿ ಕಾಯುತ್ತಿದ್ದರು. ಅವರಿಗಾಗಿ ಹದಿನೇಳು ವಿಜಯ ಮಂಟಪಗಳನ್ನು ಏರಿಸಿದ್ದರು. ಭಾರತದ ವಿವಿಧ ಭಾಷೆಗಳಲ್ಲಿ ಒಟ್ಟು ಇಪ್ಪತ್ನಾಲ್ಕು ಸ್ವಾಗತ ಭಾಷಣವನ್ನು ಅವರಿಗೆ ಅರ್ಪಿಸಲಾಯಿತು. ನಗರದ ಇಡೀ ಸಾರ್ವಜನಿಕ ಜೀವನವೇ ಸ್ಥಗಿತಗೊಂಡಿತು. ಒಂಬತ್ತು ದಿನಗಳ ಸಂಭ್ರಮದ ಮೇಳ.

"ಜನರ ಹುಚ್ಚು ನಿರೀಕ್ಷೆಯನ್ನು ತಣಿಸುತ್ತ ಭಾರತಕ್ಕೆ ತಮ್ಮ ಸಂದೇಶವನ್ನಿತ್ತರು—ರಾಮ ಶಿವ ಕೃಷ್ಣರ ಪುಣ್ಯಭೂಮಿಯ ಪುನರುತ್ಥಾನದ ಶಂಖನಾದದಂತೆ. ಯುದ್ಧಕ್ಕೆ ಸನ್ನದ್ಧರಾಗಲು ಜನರ ಸುಪ್ತಾತ್ಮವನ್ನು ಬಡಿದೆಬ್ಬಿಸಿದರು. ತಮ್ಮ ಸಮರ ನೀತಿಯನ್ನು ಜನರಿಗೆ ವಿವರಿಸಿ ಇಡಿ ಜನಸಮೂಹಕ್ಕೆ ಮೇಲೇಳಲು ಕರೆ ಕೊಟ್ಟರು."

ನಾನು ಮೂಕವಿಸ್ಮಿತನಾಗಿ ಅವರ ಭಾಷಣಗಳನ್ನು ಕೇಳಿದೆ. ನಾನಾಗ ಲಾ ಕಾಲೇಜಿನಲ್ಲಿ ಓದುತ್ತಿದ್ದೆ. ಆಗ ಲಾ ಕಾಲೇಜಿನಲ್ಲಿ ಹೆಚ್ಚಿನ ಅಧ್ಯಯನವೇನೂ ಇರಲಿಲ್ಲ. ಸಂಜೆ ಎರಡು ಗಂಟೆ ಮಾತ್ರ ಕ್ಲಾಸ್ ನಡೆಯುತ್ತಿತ್ತು. ಲಾ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಯಾವಾಗಲೂ ತೀಕ್ಷ್ಣಬುದ್ಧಿಯ ಧೈರ್ಯಶಾಲಿಗಳು. ನಾನು ಮತ್ತು ನನ್ನ ಸ್ನೇಹಿತರು ಸ್ವಾಮೀಜಿ ಬರುವ ದಿನ ಎಗ್ಮೋರ್ ರೈಲ್ವೇ ನಿಲ್ದಾಣಕ್ಕೆ ಹೋಗಿದ್ದೆವು. ಎರಡು ಕುದುರೆಗಳನ್ನು ಕಟ್ಟಿದ ಒಂದು ಗಾಡಿಯನ್ನು ಸ್ವಾಮೀಜಿಯವರಿಗಾಗಿ ಕಾದಿರಿಸಲಾಗಿತ್ತು. ಅವರನ್ನು ಮೆರವಣಿಗೆಯ ಮೂಲಕ ಕ್ಯಾಸೆಲ್ ಕರ್ನನ್‌ಗೆ ಕರೆದೊಯ್ಯಬೇಕಿತ್ತು. ನಿಲ್ದಾಣದಲ್ಲಿ ಜನ ಸಾಗರವೆ ನೆರೆದಿತ್ತು. ಸ್ವಾಮೀಜಿಯವರಿದ್ದ ರೈಲು ಕಣ್ಣಿಗೆ ಕಾಣುತ್ತಿದ್ದಂತೆಯೆ ಜಯಧ್ವನಿ ಮುಗಿಲು ಮುಟ್ಟಿತು. ಅವರು ರೈಲಿನಿಂದಿಳಿದು ನಿಧಾನವಾಗಿ ಗಾಡಿಯ ಕಡೆ ಹೊರಟರು. ಮೆರವಣಿಗೆ ಸ್ವಲ್ಪ ದೂರ ಮುಂದುವರೆದ ಮೇಲೆ ನಾನು ಮತ್ತೆ ಕೆಲವರು ಗಾಡಿಯಿಂದ ಕುದುರೆಗಳನ್ನು ಬಿಚ್ಚಿ ನಾವೇ ಅದನ್ನು ಎಳೆಯಲಾರಂಭಿಸಿದೆವು. ನಮ್ಮದೊಂದು ಮಹದಾಸೆ ಪೂರ್ಣವಾದಂತೆ ಅತ್ಯಾನಂದವಾಯಿತು. ನಮಗೆ ಸ್ವಾಮಿ ವಿವೇಕಾನಂದರು ಭಾರತದ ಪ್ರತಿರೂಪ, ಸ್ವರ್ಗದಿಂದಿಳಿದ ದೇವದೂತ.

ಸ್ವಾಮೀಜಿ ಮದ್ರಾಸಿನಲ್ಲಿ ಇರುವಷ್ಟು ಕಾಲವೂ ನಾನು ಹೆಚ್ಚಾಗಿ ಅವರೊಡನೆಯೇ ಇದ್ದೆ. ಪ್ರತಿದಿನವೂ ಸಂದರ್ಶಕರು ನಿರಂತರವಾಗಿ ಬಂದು ಹೋಗುತ್ತಲೆ ಇದ್ದರು. ಕೆಲವರು ಅವರ ಹತ್ತಿರ ಮೌನವಾಗಿ ಕುಳಿತು ಅವರ ಅಮೃತವಾಣಿಯನ್ನು ಕೇಳುತ್ತಿದ್ದರು. ಕೆಲವರು ಅವರೊಡನೆ ಗಾಢ ಚರ್ಚೆ ನಡೆಸಿದರು. ಕೆಲವು ನಿಕಟವರ್ತಿಗಳು ದಕ್ಷಿಣ ಭಾರತದಲ್ಲಿ ಅವರ ಮುಂದಿನ ವೇದಾಂತ ಕಾರ್ಯವನ್ನು ಕುರಿತು ಚರ್ಚಿಸಿದರು. ನಾನು ಸದಾ ಅವರ ಸನಿಹದಲ್ಲಿ ಇರುತ್ತಿದ್ದೆ. ಅವರೂ ನನ್ನನ್ನು ಗುರುತಿಸಿ ೧೮೯೨ರಲ್ಲಿ ತಾವು ನಮ್ಮ ಮನೆಗೆ ಬಂದದ್ದನ್ನು ನೆನಪಿಸಿಕೊಂಡರು. ಅವರು ನನ್ನನ್ನು ನೋಡಿದಾಗಲೆಲ್ಲ ಕಣ್ಣರಳಿಸಿ ಮುಗುಳ್ನಗುತ್ತಿದ್ದುದನ್ನು ನಾನೆಂದೆಂದೂ ಮರೆಯಲಾರೆ. ನನ್ನ ತಂದೆ ಸುಂದರರಾಮ ಅಯ್ಯರ್ ಕೂಡ ಸ್ವಾಮೀಜಿಯವರನ್ನು ಅನೇಕ ಬಾರಿ ಸಂಧಿಸಿದರು. ಅವರು ತಮ್ಮ ನೆನಪುಗಳನ್ನು "ಸ್ವಾಮೀಜಿಯವರೊಡನೆ ನನ್ನ ಎರಡನೆಯ ನವರಾತ್ರಿ" ಎಂಬ ಲೇಖನದಲ್ಲಿ ಹಿಡಿದಿರಿಸಿರುವರು.

೧೮೯೨ರ ವಿವೇಕಾನಂದರಿಗೂ ಮತ್ತು ೧೮೯೭ರ ವಿವೇಕಾನಂದರಿಗೂ ಇದ್ದ ವ್ಯತ್ಯಾಸ ಗಮನಾರ್ಹವಾದುದು. ೧೮೯೨ರಲ್ಲಿ ಅವರಿಗೆ ಭವಿಷ್ಯದ ಬಗ್ಗೆ ನಿಶ್ಚಿತತೆಯಿರಲಿಲ್ಲ. ಈಗ ೧೮೯೭ರಲ್ಲಿ ತಮ್ಮ ಧ್ಯೇಯದ ಮತ್ತದರ ಸಫಲತೆಯ ಬಗ್ಗೆ ಸ್ಪಷ್ಟ ಚಿತ್ರ ಅವರ ಮುಂದಿದೆ. ಅವರು ನಿಶ್ಚಿಂತೆಯಿಂದ, ಆತ್ಮವಿಶ್ವಾಸದಿಂದ ನಿರ್ದಿಷ್ಟ ಮಾರ್ಗದಲ್ಲಿ ಮುಂದುವರೆಯುತ್ತಿರುವರು.

> **ಆ ಅಪೂರ್ವ ಧ್ವನಿಯನ್ನು ಕೇಳುವವರೆಗೂ ಸಂಗೀತವೆಂದರೆ ಏನೆಂಬುದೇ ತಿಳಿದಿರಲಿಲ್ಲವೆನಿಸಿತು.**
>
> *—ಸಿಸ್ಟರ್ ಕ್ರಿಸ್ಟೀನ್*

೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ಹಾಡಿದ ಹಾಡುಗಳನ್ನು ಕೇಳುವ ಸೌಭಾಗ್ಯ ಒದಗಿತು. ಅವರ ಸಂಗೀತಮಯ ಧ್ವನಿಯನ್ನು ನಾನಾಗಲೇ ೧೮೯೨ರಲ್ಲಿ ಅನುಭವಿಸಿದ್ದೆ. ತಮ್ಮ ಹಾಡುಗಳಿಂದ ರಾಮಕೃಷ್ಣ ಪರಮಹಂಸರನ್ನು ಸಮಾಧಿಗೆ ಕಳಿಸುತ್ತಿದ್ದರೆಂಬುದು ನನಗೆ ಅನಂತರವೇ ತಿಳಿಯಿತು. ಅವರು ಕ್ಯಾಸೆಲ್ ಕರ್ನನ್‌ನಲ್ಲಿ 'ಗೀತಗೋವಿಂದ'ವನ್ನು ಹಾಡಿದರು. ಅವರು ಹಾಡಿದ ಧಾಟಿ ದಕ್ಷಿಣ ಭಾರತದ ಧಾಟಿಗಿಂತ ತುಂಬ ಬೇರೆಯಾದುದು. ಅವರ ಮಧುರ ಕಂಠ ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತಿತು.

ಒಂದು ದಿನ ಸಂಜೆ ಒಂದು ವಿಚಿತ್ರ ಘಟನೆ ಸಂಭವಿಸಿತು. ಒಬ್ಬ ಮಡಿವಂತ ಪಂಡಿತರು ಇದ್ದಕ್ಕಿದ್ದಂತೆಯೆ ಎದ್ದು ನಿಂತು ಸಂಸ್ಕೃತದಲ್ಲಿ ನೇರವಾಗಿ ಸ್ವಾಮೀಜಿಯವರನ್ನು ಕೇಳಿದರು: "ನೀವು ಬ್ರಾಹ್ಮಣರಲ್ಲವೆಂದು ಕೇಳಿದೆ. ಶಾಸ್ತ್ರದ ಪ್ರಕಾರ ನಿಮಗೆ ಸಂನ್ಯಾಸದಲ್ಲಿ ಅಧಿಕಾರವಿಲ್ಲ. ಹಾಗಿದ್ದರೂ ಈ ಸಂನ್ಯಾಸೀ ಉಡುಪನ್ನು ಧರಿಸಿರುವಿರಲ್ಲ?" ಅಂಥ ವ್ಯಕ್ತಿಗಳೊಡನೆ ಬಹಳ ಹೊತ್ತು ಚರ್ಚಿಸಲು ಇಷ್ಟಪಡದೆ ಸ್ವಾಮೀಜಿ ತಮ್ಮ ಮೊನಚಾದ ಉತ್ತರದಿಂದ ಪಂಡಿತರ ವಾದವನ್ನು ತುಂಡರಿಸಿದರು: "ಪ್ರತಿಯೊಬ್ಬ ಬ್ರಾಹ್ಮಣನು ಸಂಧ್ಯಾವಂದನೆಯ ಕಾಲದಲ್ಲಿ ಯಾರನ್ನು ವಂದಿಸುವನೊ ಆ ಚಿತ್ರಗುಪ್ತನ ವಂಶಕ್ಕೆ ಸೇರಿದವನು ನಾನು. ಆದ್ದರಿಂದ ಬ್ರಾಹ್ಮಣರು ಸಂನ್ಯಾಸಕ್ಕೆ ಅರ್ಹರಾದರೆ ನನಗೆ ಅವರಿಗಿಂತಲೂ ಹೆಚ್ಚು ಅರ್ಹತೆಯಿದೆ." ಅನಂತರ ಸ್ವಾಮೀಜಿ ಆ ಪಂಡಿತರನ್ನು

ಕುರಿತು. "ನಿಮ್ಮ ಸಂಸ್ಕೃತ ಪ್ರಶ್ನೆಯಲ್ಲಿ ಒಂದು ಅಕ್ಷಮ್ಯ ತಪ್ಪು ಉಚ್ಚಾರಣೆ ಇದೆ. ಪಾಣಿನಿಯು ಈ ರೀತಿಯ ತಪ್ಪು ಉಚ್ಚಾರಣೆಯನ್ನು ನ ಮ್ಲೇಚ್ಛಿತಂ ವೈ ನಾಭಾಷಿತಂ ವೈ—ಎಂದು ದೂಷಿಸುತ್ತಾನೆ. ಆದ್ದರಿಂದ ನಿಮಗೆ ಈ ಚರ್ಚೆಯನ್ನು ಮುಂದುವರಿಸಲು ಅಧಿಕಾರವಿಲ್ಲ" ಎಂದರು. ಪಂಡಿತರಿಗೆ ಮುಖಭಂಗವಾಗಿ ಹೊರಟು ಹೋದರು. ಶ್ರೋತೃಗಳೆಲ್ಲ ಸ್ವಾಮೀಜಿಯವರನ್ನು ಅಷ್ಟೊಂದು ಗೌರವಿಸುತ್ತಿರುವಾಗ ಈ ರೀತಿಯ ಅನುಚಿತ ಪ್ರಶ್ನೆಯನ್ನು ಅವರು ಇಷ್ಟಪಡುವುದಿಲ್ಲ ಎಂದೂ ಅವರು ಭಾವಿಸಿರಬಹುದು.

ಸ್ವಾಮಿ ವಿವೇಕಾನಂದರ ಮದ್ರಾಸಿನ ಮೊದಲ ಉಪನ್ಯಾಸ "ನನ್ನ ಸಮರನೀತಿ" ನನ್ನ ಮೇಲೆ ಆಳವಾದ ಅಚ್ಚಳಿಯದ ಪರಿಣಾಮವನ್ನುಂಟುಮಾಡಿತು. ಅವರ ಒಂದೊಂದು ಶಬ್ದವೂ ನನ್ನ ನರನಾಡಿಯನ್ನೂ ಮಿಡಿಯಿತು, ನನ್ನ ಕಣ್ಣುಗಳಲ್ಲಿ ನೀರೂಡಿಸಿತು. ಅವರ ಭಾಷಣವನ್ನು ಕೇಳಿದ ಅನೇಕರ ಪರಿಸ್ಥಿತಿ ಇದೇ ಆಗಿತ್ತು. ಅಲ್ಲಿಯೇ ಭಾರತದ ಜನಸಾಧಾರಣರ ಅಜ್ಞಾನ, ದಾರಿದ್ರ್ಯ, ದುಃಖಗಳನ್ನು ಪರಿಹರಿಸಲು ನಮ್ಮ ಕೈಲಾದಷ್ಟು ದುಡಿಯಬೇಕೆಂದು ನಾವು ಪ್ರತಿಜ್ಞೆ ಮಾಡಿದೆವು. ನಾನು ಸ್ವಾಮೀಜಿಯವರ ಇತರೆ ಉಪನ್ಯಾಸಗಳನ್ನೂ ಕೇಳಿದೆ. "ಭಾರತದ ಮಹಾಪುರುಷರು" ನನ್ನ ಮನಸ್ಸಿನ ಮೇಲೆ ಆಳ ಪರಿಣಾಮವನ್ನುಂಟುಮಾಡಿತು.

ಕೊನೆಯದಾಗಿ ೧೯೫೨ರಲ್ಲಿ ನನಗಾದ ಒಂದು ಅಪೂರ್ವ ಅನುಭವವನ್ನು ಪ್ರಸ್ತಾಪಿಸುತ್ತೇನೆ. ನಾನಾಗ ಉತ್ತರ ಭಾರತದಲ್ಲಿ ಯಾತ್ರೆ ಮಾಡುತ್ತಿದ್ದೆ. ಆಗ ಬೇಲೂರು ರಾಮಕೃಷ್ಣ ಮಠದಲ್ಲಿ ಕೆಲಕಾಲ ಕಳೆಯುವ ಭಾಗ್ಯ ನನಗೆ ಲಭಿಸಿತು. ಸ್ವಾಮಿಗಳೊಬ್ಬರು ಬೇಲೂರು ಮಠವನ್ನೆಲ್ಲ ತೋರಿಸುತ್ತ ನನ್ನನ್ನು ಸ್ವಾಮಿ ವಿವೇಕಾನಂದರಿದ್ದ ಕೊಠಡಿಗೆ ಕರೆದುಕೊಂಡು ಹೋದರು. ಸಾಮಾನ್ಯವಾಗಿ ಅಲ್ಲಿ ಯಾರನ್ನೂ ಒಳಗೆ ಬಿಡುವುದಿಲ್ಲ. ನನ್ನನ್ನು ಕರೆದುಕೊಂಡು ಹೋದ ಸ್ವಾಮಿಗಳು ಹೇಳಿದರು: "ನೀವು ಚಿಕ್ಕಂದಿನಲ್ಲೇ ಸ್ವಾಮೀಜಿಯವರನ್ನು ಸಂಧಿಸಿ ಅವರಿಂದ ಪ್ರಭಾವಿತರಾದವರು ಮತ್ತು ನಿಮ್ಮ ತಂದೆಯಂತೆ ಜೀವನವಿಡೀ ರಾಮಕೃಷ್ಣ ಸಂಘದ ಅನುಯಾಯಿಗಳಾಗಿರುವಿರಿ. ಆದ್ದರಿಂದ ನಿಮಗೆ ಈ ನಿಯಮ ಅನ್ವಯಿಸುವುದಿಲ್ಲ." ನಾನು ಅತ್ಯಂತ ಭಕ್ತಿಯಿಂದ, ಉಸಿರನ್ನು ಬಿಗಿಹಿಡಿದು ಕೊಠಡಿಯನ್ನು ಪ್ರವೇಶಿಸಿದೆ. ಅದು ಗಂಗೆಗೆ ಎದುರಾಗಿದೆ, ಪವಿತ್ರತೆ ಮತ್ತು ಪ್ರಶಾಂತತೆಯ ವಾತಾವರಣದಿಂದ ತುಂಬಿ ತುಳುಕುತ್ತಿದೆ. ಅಲ್ಲಿಂದ ಕಾಣುವ ರಮ್ಯದೃಶ್ಯವನ್ನು ಕಣ್ತುಂಬ ನೋಡಿ ಆನಂದಿಸಿದೆ, ಅಲ್ಲಿಯ ಪವಿತ್ರತೆಯಲ್ಲಿ ಮಿಂದು ಪುನೀತನಾದೆ. ಅಲ್ಲಿಯೇ ಸ್ವಲ್ಪ ಹೊತ್ತು ಧ್ಯಾನಕ್ಕೆ ಕುಳಿತು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ, ಮಾತೃಭೂಮಿಗೆ ಮತ್ತು ಜಗತ್ತಿನ ಆಧ್ಯಾತ್ಮಿಕ ಉನ್ನತಿಗೆ ಅವರು ಸಲ್ಲಿಸಿದ ಅಸದೃಶ ಸೇವೆ—ಇವನ್ನೆಲ್ಲ ಚಿಂತಿಸಿದೆ. ಸ್ವಾಮಿ ವಿವೇಕಾನಂದರು ವಾಸಿಸಿದ್ದ ಆ ಕೊಠಡಿಯಲ್ಲಿರುವಾಗ ಜ್ಞಾನದೀಪದ ದಿವ್ಯಪ್ರಭೆ ನನ್ನ ಹೃದಯವನ್ನು ಆವರಿಸಿದಂತೆನಿಸಿತು.

*(ಪ್ರಬುದ್ಧ ಭಾರತ, ಸೆಪ್ಟೆಂಬರ್ ಮತ್ತು ಅಕ್ಟೋಬರ್, ೧೯೫೩)*

◆

## ಗುರುವಿನ ವ್ಯಕ್ತಿತ್ವ

ಇಂಗ್ಲೆಂಡಿನಲ್ಲಿ ಒಬ್ಬ ಮಿತ್ರನು ಸ್ವಾಮಿ ವಿವೇಕಾನಂದರನ್ನು "ಗುರುವಿನ ಶೀಲ ಕಟ್ಟಿಕೊಂಡು ನಮಗೇನು ಆಗಬೇಕಾಗಿದೆ? ಅವನು ಹೇಳುವುದನ್ನಷ್ಟು ಕೇಳಿ, ಪರೀಕ್ಷಿಸಿ, ನಾವು ಸ್ವೀಕರಿಸಿದರೆ ಮುಗಿಯಿತಲ್ಲ?" ಎಂದು ಪ್ರಶ್ನಿಸಿದ ಪ್ರಸಂಗವನ್ನು ಉಲ್ಲೇಖಿಸಿ ಸ್ವಾಮೀಜಿಯವರು ಅಧ್ಯಾತ್ಮ ಗುರುವಿನ ವ್ಯಕ್ತಿತ್ವ ಹೇಗಿರಬೇಕೆಂದು ಹೀಗೆ ವಿವರಿಸುತ್ತಾರೆ: "ಒಬ್ಬ ಅಧ್ಯಾಪಕನು ನನಗೆ ಗತಿಶಾಸ್ತ್ರವೋ ರಸಾಯನಶಾಸ್ತ್ರವೋ ಅಥವಾ ಯಾವುದೇ ಭೌತಿಕ ಶಾಸ್ತ್ರವನ್ನು ಕಲಿಸಲು ಬಂದಲ್ಲಿ, ಅವನ ಶೀಲ ಹೇಗಿದ್ದರೂ ಅಡ್ಡಿ ಇಲ್ಲ. ಅವನು ಆ ಎಲ್ಲ ಶಾಸ್ತ್ರಗಳನ್ನೂ ನನಗೆ ಕಲಿಸಬಲ್ಲ. ಏಕೆಂದರೆ, ಭೌತಿಕ ಶಾಸ್ತ್ರಗಳಿಗೆ ಬೇಕಾದುದು ಕೇವಲ ಬೌದ್ಧಿಕ ಜ್ಞಾನ, ಬೌದ್ಧಿಕ ಸಾಮರ್ಥ್ಯ ಅಷ್ಟೆ. ಅಂತಹವನೊಬ್ಬನಲ್ಲಿ ಆತ್ಮಶಕ್ತಿಯ ವಿಕಾಸ ಎಳ್ಳಷ್ಟೂ ಆಗಿರದಿದ್ದರೂ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಮಾತ್ರ ಇರಬಹುದು. ಆದರೆ ಅಧ್ಯಾತ್ಮ ಶಾಸ್ತ್ರದಲ್ಲಿ ಅದು ಸಾಧ್ಯವಿಲ್ಲ. ಮಲಿನ ಮನದಲ್ಲಿ ಆತ್ಮತೇಜ ಮೂಡುವುದು ಕೇವಲ ಅಶಕ್ಯ. ಅಂತಹವನ ಅಧ್ಯಾತ್ಮ ಜ್ಞಾನ ಸೊನ್ನೆ. ಇನ್ನು ಅವನು ಬೇರೆಯವರಿಗೆ ಏನು ತಾನೆ ಕಲಿಸಬಲ್ಲ? ಆಧ್ಯಾತ್ಮಿಕ ಜ್ಞಾನಕ್ಕೆ ಮೊದಲು ಇರಬೇಕಾದುದೇ ಶುಚಿತ್ವ.

"ಗುರುವಿನ ಬಗ್ಗೆ ನಾವು ಮೊಟ್ಟಮೊದಲಿಗೆ ಗಮನಿಸಬೇಕಾದ ಸಂಗತಿ ಎಂದರೆ, ಅವನ ಸ್ವಂತ ವ್ಯಕ್ತಿತ್ವ. ಅನಂತರ ಅವನು ಆಡುವ ಮಾತುಗಳು. ಏಕೆಂದರೆ, ಗುರುವು ಒಂದು ಶಕ್ತಿಕ್ಷೇಪಕವಿದ್ದಂತೆ. ಅವನಲ್ಲೆ ಅಧ್ಯಾತ್ಮ ಶಕ್ತಿ ಇಲ್ಲವಾದಲ್ಲಿ ಅವನು ಆ ಶಕ್ತಿಯ ಅಲೆ ಕಳುಹುವುದಾದರೂ ಹೇಗೆ? ಉದಾಹರಣೆಗೆ, 'ಹೀಟರ್' ಕಾದಿದ್ದಲ್ಲಿ ಮಾತ್ರ ಉಷ್ಣತೆಯ ಅಲೆಗಳನ್ನು ಅದು ಕಳುಹಿಸಬಲ್ಲದು. ಅನ್ಯಥಾ ಸಾಧ್ಯವಿಲ್ಲ. ಅದರಂತೆಯೇ ಗುರುವಿನ ಮನಸ್ಸಿನ ಅಲೆಗಳು ಶಿಷ್ಯನ ಮನಸ್ಸಿಗೆ ಹೋಗಿ ಮುಟ್ಟಬೇಕಾದಲ್ಲಿ ಗುರುವಿನಲ್ಲಿ ಆ ಶಕ್ತಿ ಇರಬೇಕು. ಅದು ಶಕ್ತಿಕ್ಷೇಪಣೆಯ ಪ್ರಶ್ನೆ. ಕೇವಲ ನಮ್ಮ ಬೌದ್ಧಿಕ ಶಕ್ತಿಗಳಿಗೆ ಚಾಲನೆ ಕೊಡುವುದಷ್ಟೆ ಅಲ್ಲ. ವಾಸ್ತವಿಕವಾದ ಮತ್ತು ಅನುಭವಕ್ಕೆ ಬರುವಂತಹ ಒಂದು ಶಕ್ತಿ ಗುರುವಿನಿಂದ ಶಿಷ್ಯನಿಗೆ ಪ್ರಾಪ್ತವಾಗುತ್ತದೆ ಮತ್ತು ಶಿಷ್ಯನ ಹೃದಯದಲ್ಲಿ ಅದು ವೃದ್ಧಿಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದ ಗುರುವಿನ ಅಂತರಂಗ ಅತ್ಯಂತ ಶುದ್ಧವಾಗಿರಬೇಕಾದುದು ಅತ್ಯಾವಶ್ಯಕ. "

◆